CW : 5
PW : 4

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## CC No.53/2025

| | | |
|---|---|---|
| ಸಾಕ್ಷಿದಾರರ ಹೆಸರು | : | ಮೊಹಮ್ಮದ್ ಸೂಯೇಬ್ |
| ತಂದೆಯ ಹೆಸರು | : | ಉಮರ್ ಸಾಹೇಬ್ |
| ಪ್ರಾಯ | : | 27 |
| ಉದ್ಯೋಗ | : | ಶಿಕ್ಷಕ |
| ವಾಸಸ್ಥಳ | : | ಬಪ್ಪಳಿಗೆ |
| ದಿನಾಂಕಃ 14.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ನಾನು ಮಸೀದಿಯಿಂದ ದಿಃ28.09.2024 ರಂದು ರಾತ್ರಿ 10.30/11.00 ಗಂಟೆ ಸಮಯ ಬಪ್ಪಳಿಗೆ ಬೈಪಾಸ್ ರಸ್ತೆಯಲ್ಲಿ ಬರುತ್ತಿದ್ದಾಗ ನನ್ನ ಮುಂದೆ ಇದ್ದ ಮೋಟಾರ್ ಸೈಕಲ್ ಚಾಲಕ ಸಡನ್ ಆಗಿ ಬಲಕ್ಕೆ ತಿರುಗಿದ್ದು ಮುಂದಿನಿಂದ ಬರುತ್ತಿದ್ದ ಕಾರಿಗೆ ಡಿಕ್ಕಿಪಡಿಸಿದ್ದು, ಅದರ ಪರಿಣಾಮ ಬೈಕ್ ಚಾಲಕನಿಗೆ ಗಾಯಗಳಾಗಿರುತ್ತವೆ. ನಂತರ ಪಿಕ್ ಅಪ್ ನಲ್ಲಿ ಹಾಕಿ ಆಸ್ಪತ್ರೆಗೆ ಕಳುಹಿಸಿರುತ್ತೇವೆ. ಕಾರಿನಲ್ಲಿ ಎಷ್ಟು ಜನ ಇದ್ದರು ಎಂದು ಗೊತ್ತಿಲ್ಲ. ಬೈಕಿನ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ. ಆರೋಪಿಯನ್ನು ನೋಡಿದರೆ ಗುರುತಿಸಲಾಗುವುದಿಲ್ಲ. ವಾಹನಗಳ ಸಂಖ್ಯೆ ಗೊತ್ತಿಲ್ಲ. ವಾಹನಗಳನ್ನು ನಿಪಿ5 ಮತ್ತು 6 ರಲ್ಲಿ ನೋಡಿ ಗುರುತಿಸಿರುತ್ತಾರೆ. 2 ದಿನಗಳ ನಂತರ ಪೋಲೀಸರು ಸ್ಥಳಕ್ಕೆ ಕರೆದಿದ್ದು, ಅಲ್ಲಿ ಸ್ಥಳವನ್ನು ನಾನು ತೋರಿಸಿದ ಮೇರೆಗೆ, ಇನ್ನೊಬ್ಬ ಸಾಕ್ಷಿದಾರರ ಸಮಕ್ಷಮ ಮಹಜರು ಜರುಗಿಸಿರುತ್ತಾರೆ. ಅವರ ಹೆಸರು ನೆನಪಿಲ್ಲ. ನಂತರ ಕಾರನ್ನುಮಹಜರಿಗಿಂತ ಮೊದಲೇ ಠಾಣೆಗೆ ತೆಗೆದುಕೊಂಡು ಹೋಗಿದ್ದರು. ಬೈಕ್ ನ್ನು ಮಹಜರು ಮುಗಿದ

CW : 5
PW : 4

ನಂತರ ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ಠಾಣೆಯಲ್ಲಿ 2 ದಿನಗಳ ನಂತರ ಕಾರನ್ನು ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ. ಈ ಕುರಿತು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸ್ಥಳ ಮಹಜರು, ಕರಡು ನಕಾಶೆ,ಸೊತ್ತು ಸ್ವಾಧೀನತಾ ಮಹಜರನ್ನು ಈಗಾಗಲೇ ನಿಪಿ2 ರಿಂದ 4 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ2(ಬಿ)ಯಿಂದ 4(ಬಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲಿಗೆ ಅನುಮತಿಯನ್ನು ಸರ್ಕಾರಿ ಸಹಾಯಕ ಅಭಿಯೋಜಕರವರು ಕೋರಿಕೊಂಡಿದ್ದು, ಅನುಮತಿ ನೀಡಿಲಾಯಿತು)**

**ಪಾಟಿಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಘಟನಾ ಸ್ಥಳದಲ್ಲಿ ಸರಿಯಾಗಿ ನೋಡಿದ್ದು, ಈಗ ನೋಡಿದರೆ ಗುರುತಿಸಲಾಗುವುದಿಲ್ಲ ಎಂದು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ.

**ಪಾಟಿಸವಾಲಿಗೆ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಿತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು